ದಿನಾಂಕಃ 29-03-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ದಿಃ 04.10.2018 ರಂದು ಆದ ಆದೇಶದ ಅನ್ವಯ ಮುಂದು ವರೆದ ಪಾಟೀ ಸವಾಲು

ಪಾಟೀ ಸವಾಲು ಶ್ರೀ ಹೆಚ್.ಇ.ಎ.ಕೆ. ವಕೀಲರಿಂದ – ಆರೋಪಿತರ ಪರವಾಗಿ

14. ನನಗೆ ನಾನಿರುವ ಪೋಟೋಗಳನ್ನು ತೋರಿಸಿದರೆ ಗುರುತು ಹಿಡಿಯುತ್ತೇನೆ. ಅದೇ ರೀತಿ ನನ್ನ ಸ್ನೇಹಿತರು ಇರುವ ಪೋಟೋಗಳನ್ನು ತೋರಿಸಿದರೆ ಗುರುತಿಸುತ್ತೇನೆ. ಈಗ ತೋರಿಸಿದ ಒಂದು ಪೋಟೋದಲ್ಲಿ ಕೆಳಗಡೆ ಕುಳಿತಿರುವ ಸಾಲಿನಲ್ಲಿ ಬಲಭಾಗದಿಂದ ಮೊದಲನೇ ವ್ಯಕ್ತಿ ನಾನು ಆಗಿರುತ್ತೇನೆ. ನನ್ನ ಪಕ್ಕ ಕುಳಿತಿರುವ ವ್ಯಕ್ತಿಯ ಹೆಸರು ಮಂಜಾ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಿಂಬಾಗದಲ್ಲಿ ನಿಂತಿರುವ ವ್ಯಕ್ತಿಯ ಹೆಸರು ಶಶಾಂಕ್ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಶಶಾಂಕ್ ಎನ್ನುವವರು ಸಾಕ್ಷಿಯಾಗಿದ್ದು ಅವರು ಇಂದು ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ಅವರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಪೋಟೋವನ್ನು ನಿ.ಡಿ.2 ಎಂದು ಗುರುತಿಸಲಾಯಿತು. ಈಗ ತೋರಿಸಿದ ಇನ್ನೊಂದು ಪೋಟೋದಲ್ಲಿ ಇರುವ ಬಲಭಾಗದಿಂದ ಮೊದಲನೇ ವ್ಯಕ್ತಿ ಮಂಜಾ ಎಂದರೆ ಗೊತ್ತಿಲ್ಲ ಮತ್ತು 4 ನೇ ವ್ಯಕ್ತಿ ಸಂದೀಪ ಎಂದರೆ ಸರಿ. ಸದರಿ ಪೋಟೋವನ್ನು ನಿ.ಡಿ.3 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ಎಡಭಾಗದಿಂದ ಮೊದಲನೇಯವರಾಗಿ ನಿಂತಿರುವ ವ್ಯಕ್ತಿ ಶಶಾಂಕ್

ಎಂದರೆ ಸರಿ. ಅದನ್ನು ನಿ.ಡಿ.4 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ನಾನು ಮತ್ತು ಪ್ರಾಸಾ.4 ಪುಟ್ಟನಂಜ ಇರುತ್ತೇವೆ ಎಂದರೆ ಸರಿ. ಅದನ್ನು ನಿ.ಡಿ.5 ಎಂದು ಗುರುತಿಸಲಾಯಿತು.

15. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ನಾನು ಮತ್ತು ಪ್ರಾಸಾ.4 ಪುಟ್ಟನಂಜ ಇರುತ್ತೇವೆ ಎಂದರೆ ಸರಿ. ಅದನ್ನು ನಿ.ಡಿ.6 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ನಾನು ಮತ್ತು ಪ್ರಾಸಾ.4 ಪುಟ್ಟನಂಜ ಇರುತ್ತೇವೆ ಎಂದರೆ ಸರಿ. ಅದನ್ನು ನಿ.ಡಿ.7 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ಪ್ರಾಸಾ.10 - ಸಂದೀಪ ಮತ್ತು ಪ್ರಾಸಾ.5 ಶಶಾಂಕ್ ಇರುತ್ತಾರೆ ಎಂದರೆ ಸರಿ. ಅದನ್ನು ನಿ.ಡಿ.8 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ಪ್ರಾಸಾ.4 – ಪುಟ್ಟನಂಜ ಮತ್ತು ಪ್ರಾಸಾ.5 - ಶಶಾಂಕ್ ಇರುತ್ತಾರೆ ಎಂದರೆ ಸರಿ. ಅದನ್ನು ನಿ.ಡಿ.9 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ಪ್ರಾಸಾ.4 – ಪುಟ್ಟನಂಜ ಮತ್ತು ಪ್ರಾಸಾ.10 - ಸಂದೀಪ ಇರುತ್ತಾರೆ ಎಂದರೆ ಸರಿ. ಅದನ್ನು ನಿ.ಡಿ.10 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ಪ್ರಾಸಾ.4 – ಪುಟ್ಟನಂಜದ ಪ್ರಾಸಾ.10 - ಸಂದೀಪ ಮತ್ತು ಪ್ರಾಸಾ.5 - ಶಶಾಂಕ್ ಇರುತ್ತಾರೆ ಎಂದರೆ ಸರಿ. ಅದನ್ನು ನಿ.ಡಿ.11 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ಪ್ರಾಸಾ.4 – ಪುಟ್ಟನಂಜ ಮತ್ತು ಪ್ರಾಸಾ.5 - ಶಶಾಂಕ್ ಇರುತ್ತಾರೆ

ಎಂದರೆ ಸರಿ. ಅದನ್ನು ನಿ.ಡಿ.12 ಎಂದು ಗುರುತಿಸಲಾಯಿತು. ನನಗೆ ಖಾಂಡ್ಯ ಪ್ರವೀಣ್ ಈತನ ಬಗ್ಗೆ ನನಗೆ ಗೊತ್ತಿಲ್ಲ. ಖಾಂಡ್ಯ ಗ್ರಾಮವು ಬಾಳೆಹೊನ್ನೂರಿನಿಂದ ಸುಮಾರು 10 ಕಿ.ಮೀ ದೂರ ಇರುತ್ತದೆ. ಖಾಂಡ್ಯ ಪ್ರವೀಣ್ ಇವರು ಬಜರಂಗಧಳದ ರಾಜ್ಯ ಸಂಚಾಲಕರು ಆಗಿರುವ ವಿಷಯ ಗೊತ್ತು, ಆದರೆ ಅವರು ನನಗೆ ಗೊತ್ತಿರುವುದಿಲ್ಲ. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ಫ್ರಾಸಾ.10 ಸಂದೀಪ ಇರುತ್ತಾರೆ. ಆದರೆ ಖಾಂಡ್ಯ ಪ್ರವೀಣ್ ಇರುವ ಬಗ್ಗೆ ಗೊತ್ತಿಲ್ಲ. ಸದರಿ ಪೋಟೋವನ್ನು ನಿ.ಡಿ. 13 ಎಂದು ಗುರುತಿಸಲಾಯಿತು. ಈಗ ತೋರಿಸಿದ ಪೋಟೋದಲ್ಲಿ ನಾನು ಇರುತ್ತೇನೆ ಎಂದರೆ ಸರಿ. ಅದನ್ನು ನಿ.ಡಿ.14 ಎಂದು ಗುರುತಿಸಲಾಯಿತು. ಸದರಿ ಪೋಟೋವನ್ನು ಪೊಲೀಸ್ ಠಾಣೆಯಲ್ಲಿ ಹಾಕಿದ್ದಾಗಿರುತ್ತದೆ. ನಾನು ರೌಡಿ ಶೀಟರ್ ಆದ ಕಾರಣ ಅದನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಸದರಿ ಪೋಟೋವನ್ನು ಅಲ್ಲಿ ನೋಡಿರುತ್ತೇನೆ. ನಾನು ಪೊಲೀಸರನ್ನು ಸದರಿ ನನ್ನ ಪೋಟೋವನ್ನು ಇಲ್ಲಿ ಏಕೆ ಹಾಕಿರುತ್ತೀರಾ ಎಂದು ಕೇಳಿ ತಿಳಿದುಕೊಂಡಿರುವುದಿಲ್ಲ. ನನಗೆ ನನ್ನ ಹೆಸರಿನಲ್ಲಿ ರೌಡಿ ಶೀಟ್ ತೆಗೆದಿರುವುದು ಗೊತ್ತಿರುವುದಿಲ್ಲ.

16. ನಿ.ಡಿ.7 ಇದು ಬಜರಂಗದಳಕ್ಕೆ ಸಂಬಂದಪಟ್ಟಂತೆ ತೆಗೆದಿರುವ ಪೋಟೋ ಅಂದರೆ ಸರಿಯಲ್ಲ. ನಿ.ಡಿ.4, 6, 10 ಮತ್ತು 11 ರ ಪೋಟೋಗಳಲ್ಲಿ ಇರುವ ವ್ಯಕ್ತಿಗಳು ಧರಿಸಿರುವ ಬಟ್ಟೆ ಶಾಲು, ಧ್ವಜ ಇವುಗಳು ಬಜರಂಗದಳದ ಗುರುತುಗಳು ಎಂದರೆ ಸರಿಯಲ್ಲ.

17. ನಾನು, ಸಂದೀಪ, ಮಂಜಾ, ಶಶಾಂಕ್ ಮತ್ತು ಪುಟ್ಟನಂಜ

ಇವರೆಲ್ಲರು ಬಜರಂಗದ ಸದಸ್ಯರಾಗಿದುದ್ದರಿಂದ ಮೇಲೆ ಹೇಳಿದ ಪೋಟೋಗಳು ತೆಗೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವೆಲ್ಲರು ಬಾಳೆಹೊನ್ನುರಿನಲ್ಲಿ ಗೋ ರಕ್ಷಕರು ಎಂದು ಗುರುತಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಮುಂಚೆ ಗೋಸಗಾಣಿಕೆ ವಿಚಾರದಲ್ಲಿ ಆದ ಗಲಾಟೆಯ ಪ್ರಕರಣದಲ್ಲಿ ನಾನು ಸಾಕ್ಷಿಯು ಅಲ್ಲ. ಪಿರ್ಯಾದಿಯು ಅಲ್ಲ, ಆದರೆ ನಾನು ಅದರಲ್ಲಿ ಆರೋಪಿಯಾಗಿರುತ್ತೇನೆ. ಮತ್ತು ಈಗಲು ಸಹ ಸದರಿ ಪ್ರಕರಣ ಎನ್.ಆರ್. ಪುರ ನ್ಯಾಯಾಲಯದಲ್ಲಿ ಚಾಲ್ತಿ ಇರುತ್ತದೆ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾಃ